# ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಚಿತ್ತಾಪೂರ

**ಅಸಲು ದಾವಾ ನಂಃ 48/2019**
**ಪಿ.ಡಬ್ಲ್ಯೂಃ, 1. ಬಸಮ್ಮ.**

ದಿನಾಂಕ **16-06-2022** ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.
ಮುಂದುವರೆದ ಪಾಟಿ ಸವಾಲು :- ಶ್ರೀ ಟಿ.ವಿ.ಪಿ ವಕೀಲರಿಂದ

ದಾವಾ ಸ್ವತ್ತುಗಳು ಯಾರ ಹೆಸರಿಗೆ ಎಷ್ಟು ಇದೆ ಎಂದು ಹೇಳಲು ಆಗುವುದಿಲ್ಲ. ನನ್ನ ಅಕ್ಕ ಸಂಗಿತಾ ಇವರನ್ನು ಉಡಗಿ ಗ್ರಾಮಕ್ಕೆ ಮದುವೆ ಮಾಡಿ ಕೊಟ್ಟಿರುತ್ತಾರೆ, ನಾನು ಚಿಂಚೋಳಿಯಲ್ಲಿ ಮದುವೆ ಆಗಿರುತ್ತೇನೆ. ನನ್ನ ಗಂಡನ ಹೆಸರು ಅಶೋಕ, ಮಾವನ ಹೆಸರು ಸಾಬಣ್ಣ, ಮನೆತನದ ಹೆಸರು ಹೂಗಣ್ಣ. ಭೀಮಬಾಯಿ ಇವರನ್ನು ಮಲಗಾಣ ಗ್ರಾಮಕ್ಕೆ ಮದವೆ ಮಾಡಿ ಕೊಟ್ಟಿರುತ್ತಾರೆ. ಸುನಿತಾ ಇವರಿಗೆ ಹೂವಿನ ಬಾವಿ ಗ್ರಾವುಕ್ಕೆ ಕೊಟ್ಟಿರುತ್ತಾರೆ. ನಮ್ಮ ಮದುವೆಯನ್ನು ಬಂಗಾರ, ಬಟ್ಟೆ ಕೊಟ್ಟು ಮದುವೆ ಮಾಡಿರುತ್ತಾರೆ ಅನ್ನುವುದು ಸರಿ. ನನಗೆ ನನ್ನ ಅತ್ತೆ ಮಗನಿಗೆ ಮದುವೆ ಮಾಡಿ ಕೊಟ್ಟಿರುತ್ತಾರೆ.

2. ನನ್ನ ಗಂಡ ಕಿರಾಣಿ ಅಂಗಡಿ ನಡೆಸುತ್ತಾರೆ. ಅವರು ಇಂಗ್ಲೀಷ ಭಾಷೆಯಲ್ಲಿ ಸಹಿ ಮಾಡುತ್ತಾರೆ, ಸಾಕ್ಷಿಗೆ ಈಗ ದಿನಾಂಕ 21.12.2020 ರ ಎರಡು ನೊಂದಾಯಿತ ಕ್ರಯಪತ್ರದ ದೃಢೀಕೃತ ನಕಲುಗಳನ್ನು ತೋರಿಸಿ ಅದರಲ್ಲಿ ಸಾಕ್ಷಿದಾರರ ಸಹಿಗಳಲ್ಲಿ ತನ್ನ ಗಂಡನ ಸಹಿ ಇದೆ ಎಂದು ಸಾಕ್ಷಿ ಒಪ್ಪಿದ್ದು ಆ ಕಾರಣಕ್ಕಾಗಿ ಸದರಿ ದಾಖಲೆಗಳನ್ನು ನಿಷಾನೆ-ಡಿ-1 ಮತ್ತು 2 ಎಂದು ಒಪ್ಪಿದ ಸಹಿಗಳನ್ನು ನಿಷಾನೆ ಡಿ-1 (ಎ) ಮತ್ತು ನಿಷಾನೆ -ಡಿ 2 (ಎ) ಎಂದು ಗುರುತಿಸಲಾಯಿತು. ಸದರಿ ಕ್ರಯ ಪತ್ರಗಳು ನನ್ನ ತಾಯಿ ಸರ್ವೆ ನಂ. 21/2 ಮಾರಿದ ಬಗ್ಗೆ ನನ್ನ ಗಂಡ ಸಾಕ್ಷಿಯಾಗಿ ಸಹಿ ಮಾಡಿದ್ದಾರೆ ಎಂದರೆ ಸಾಕ್ಷಿಯು ಇಲ್ಲ ಎಂದು ಹೇಳುತ್ತಾರೆ. ನಾನು ನನ್ನ ಗಂಡ ನನ್ನ ತಾಯಿ ಎಲ್ಲರೂ ಗೊತ್ತಿದ್ದು ಈ ದಾವೆ ನಡೆಯುವ ಕಾಲಕ್ಕೆ ಅದನ್ನು ಮಾರಾಟ ಮಾಡಿದ್ದೇವೆ ಎಂದರೆ ಸಾಕ್ಷಿಯು ಇಲ್ಲ ಎಂ ದು ಹೇಳುತ್ತಾರೆ.

3. ನಾನು ನನ್ನ ತಾಯಿಯ ಮದುವೆ 10 ವರ್ಷದವಳು ಇದ್ದಾಗ ಆಗಿದ್ದು ಎಂದು ಹೇಳಿದ್ದು ಅದು ಕಾನೂನು ಬಾಹಿರವಾಗಿದ್ದು ಆದ್ದರಿಂದ ನಾವು ಕಾನೂನು ಬಾಹಿರ ಮದುವೆಯಿಂದ ಜನಿಸಿದ ಮಕ್ಕಳಾದ್ದರಿಂದ ನಮ್ಮ ತಂದೆ ಸ್ವತ್ತಿನಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸಾಕ್ಷಿಯು ನಾವು ಮೊದಲ ಹೆಂಡತಿ ಮಕ್ಕಳು ಎಂದು ಹೇಳುತ್ತಾರೆ. ಸ್ವತ್ತಿನ ಬಗ್ಗೆ ಸೇಡಂನ ಎ.ಸಿ ಕಛೇರಿಯಲ್ಲಿ ಪ್ರಕರಣ ಇತ್ತು. ನಾಗಮ್ಮ ಮೊದಲನೇ ಹೆಂಡತಿ ಇದ್ದರು ಸಹ ನನ್ನ ತಾಯಿ ಮೊದಲನೇ ಹೆಂಡತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ತಾಯಿ ಮೊದಲನೇ ಹೆಂಡತಿ ಎಂದು ತೋರಿಸುವ ವಂಶಾವಳಿ ಹಾಕಿಲ್ಲ. ಕಾನೂನು ರೀತಿಯಲ್ಲಿ ನಮಗೆ ಯಾವುದೇ ಹಕ್ಕು ಇಲ್ಲದಿದ್ದರು ಭಾಗ ಕೊಡಬೇಕೆಂದು ಸುಳ್ಳು ದಾವಾ ಹಾಕಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು

ಚಿತ್ತಾಪೂರ.